ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 305/2020

.......................................................................

CW 01
PW 02

| | | |
|---|---|---|
| ಹೆಸರು | : | ರೆಹಮಾನ್ ಜಮಾದಾರ |
| ತಂದೆಯ ಹೆಸರು | : | ಗಫಾರಸಾಬ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ರೈತಾಪಿ ಕೆಲಸ |
| ವಾಸಸ್ಥಳ | : | ತಟ್ಟಿಗೇರಾ. |

ದಿನಾಂಕ 29-10-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 2 ರಿಂದ 4 ರವರು ಪರಿಚಯ ವಿದ್ದಾರೆ. ಉಳಿದವರು ಪರಿಚಯ ಇಲ್ಲ. ಆರೋಪಿತನನ್ನು ಈ ಮೊದಲು ನೋಡಿಲ್ಲ.

ಸುಮಾರು 5 ವರ್ಷಗಳ ಹಿಂದೆ ಗೋರಿಖಾನ ಪೆಟ್ರೋಲ್ ಪಂಪ್ ಹತ್ತಿರ ಬಸ್ ಮತ್ತು ಬೈಕ ನಡುವೆ ಅಪಘಾತ ಆಗಿತ್ತು. ಬೈಕ ಸವಾರರಾದ ಶಿವಾಜಿ ಮಿರಾಶಿ ಮತ್ತು ಮಂಜುನಾಥ ಮಿರಾಶಿ ಜಾಗದಲ್ಲಿಯೇ ಮೃತಪಟ್ಟಿದ್ದರು.ಅವರು ನಮ್ಮ ಊರಿನವರು.

ನಾನು ಮಾರುಕಟ್ಟೆಯಲ್ಲಿ ಇದ್ದಾಗ ಅಪಘಾತ ವಿಷಯವನ್ನು ತಿಳಿಸಿದರು. ನಾನು ಠಾಣೆಗೆ ಹೋದೆ. ಆಗ ಪೊಲೀಸರು ಬಿಳಿ ಹಾಳೆಗೆ ಸಹಿ ಪಡೆದರು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದೂರು ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ದೂರನ್ನು **ನಿಪಿ 3 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 3 ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಘಟನಾ ಜಾಗದ

ಪಂಚನಾಮೆಯನ್ನು **ನಿಪಿ 4 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 4ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ನಾಲ್ಕು ಭಾವಚಿತ್ರಗಳನ್ನು ತೋರಿಸಿ ಕೇಳಲಾಗಿ ಅದರಲ್ಲಿ ತಾನು, ಚಾಸಾ 2 ಮತ್ತು 3 ರವರು ಇರುವುದಾಗಿ ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು **ನಿಪಿ 5 ರಿಂದ 8** ಎಂದು ಗುರುತಿಸಲಾಯಿತು. ಅವುಗಳನ್ನು ಹಳಿಯಾಳ ಸರ್ಕಾರಿ ಆಸ್ಪತ್ರೆಯಲ್ಲಿ ಶವವನ್ನು ಗುರುತಿಸುವಾಗ ತೆಗೆಯಲಾಗಿದೆ ಎನ್ನುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 24-01-2020 ರಂದು ನೀವು ಹಳಿಯಾಳ ತಾಲೂಕು ಹಲಗಿ ಗ್ರಾಮದ ಗೋರಿಖಾನ ಪೆಟ್ರೋಲ್ ಪಂಪ್ ಹತ್ತಿರ ತಲುಪಿದಾಗ ಕೆಸರೊಳಿ ಕಡೆಯಿಂದ ಹಳಿಯಾಳ ಕಡೆಗೆ ಕೆ ಎಸ್ ಆರ್ ಟಿ ಸಿ ಬಸ ಅನ್ನು ಅತಿ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ರಸ್ತೆಯ ತೀರಾ ಬಲಕ್ಕೆ ಬಂದು ಮುಂದಿನಿಂದ ಮೋಟಾರ ಸೈಕಲ್ ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದನು ಎಂದು ಬೈಕ ಸವಾರರು ಜಾಗದಲ್ಲಿಯೋ ಮೃತಪಟ್ಟರು, ಆ ಅಪಘಾತವನ್ನು ನೀವು ಕಣ್ಣಾರೆ ನೋಡಿರುತ್ತೀರಿ ಎಂದರೆ ಸರಿಯಲ್ಲ. ಮೋಟಾರ ಸೈಕಲ್ ಸವಾರರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮೃತಪಟ್ಟರು ಎಂದು, ಮೋಟಾರ ಸೈಕಲ್ ನಂಬರ ಕೆಎ-65-ಇ-6268 ಎಂದು ಬಸ್ ನಂಬರ ಕೆಎ-42-ಎಫ್-1286 ಎಂದು ಸದರಿ ಬಸ್ ಹಳಿಯಾಳ ಡಿಪೋ ದು ಅಂತಾ ದೂರಿನಲ್ಲಿ ಬರೆಯಿಸಿರುತ್ತೀರಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 6 ರವರು ಸಹ ಇದ್ದರು ಎಂದು ಬರೆಯಿಸಿದ್ದೀರಿ ಎಂದರೆ ಸರಿಯಲ್ಲ. ಘಟನೆಯ ದಿನ ನೀವೆ ಲಿಖಿತ ದೂರನ್ನು ಠಾಣೆಗೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವನ್ನು ಕಣ್ಣಾರೆ ನೋಡಿದ್ದರೂ, ದೂರನ್ನು ನೀವೆ ಸ್ವತಃ ಬರೆದುಕೊಟ್ಟಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ದಿನ ಪೊಲೀಸರು ನಿಮ್ಮ ಮತ್ತು ಪಂಚರ ಸಮಕ್ಷಮ ಸಂಜೆ 05-00 ರಿಂದ 06-00 ಗಂಟೆಯ ಸಮಯದಲ್ಲಿ ಪಂಚನಾಮೆ ಜರುಗಿಸಿದರು. ಆ ಸಮಯದಲ್ಲಿ ಅಪಘಾತಕ್ಕೋಳಪಟ್ಟ ಬಸ್ ಮತ್ತು ಮೋಟಾರ ಸೈಕಲ್ ಜಾಗದಲ್ಲಿಯೇ ಇದ್ದವು ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಕಾಣುವ ಬಸ್ ಮತ್ತು ಮೋಟಾರ ಸೈಕಲ್ ಅಪಘಾತಕ್ಕೋಳಪಟ್ಟ ವಾಹನಗಳು ಎಂದರೆ ಸರಿ. ನಿಮ್ಮ ಸಮಕ್ಷಮ ಪಂಚನಾಮೆ ಜರುಗಿಸಿದ್ದರು ಸಹ ಬಿಳಿ ಹಾಳೆಯ

ಮೇಲೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಆರೋಪಿತನು ಬಸ್ ಚಲಾಯಿಸುತ್ತಿದ್ದನು ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಸ್ ವಾಯ್ ಜಿ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.